(೧೨) ಹೊಳೆಲ್ಕೆರೆ ಪುರಸಭೆಯವರು ಕಡಿಮೆ ಬೆಲೆಗೆ ತನ್ನ ನೀಪೇಕ್ಷನವೆನ್ನು ಕೊಟಿರುವ ಬಗ್ಗೆ.

ಶ್ರೀ ಬಿ. ಸ್ವಾಮಿರಾವ್.—ಹೊಳಲ್ಕೆರೆ ಪುರಸಭೆಯವರು ಬಸ್ ನಿಲ್ದಾಣದಲ್ಲಿಯ ಒಂದು ಭಾಗವನ್ನು ಸಾರ್ವಜನಿಕರ ವಿರೋಧವಿದ್ದರೂ ಮಹಿಳಾ ವಿವಿದೋದ್ದೇಶ ಸಹಕಾರ ಸಂಘಕ್ಕೆ ಸುಮಾರು ೧ ಲಕ್ಷ ರೂಪಾಯಿ ಬೆಲೆ ಬಾಳುವ ಅತ್ಯುತ್ತಮ ಜಾಗವನ್ನು ರಿಯಾಯಿತಿ ದರದಲ್ಲಿ ಕೇವಲ ೧೮ ಸಾವಿರ ರೂಪಾಯಿಗಳಿಗೆ ದಿಡೀರ್ ಮೀಟಿಂಗಿನಲ್ಲಿ ತೀರ್ಮಾನಿಸಿ ನೀಡಿದ್ದರು. ಈ ಹಣವನ್ನು ಖಾಯಂ ಡಿಪಾಸಿಟ್‌ನಲ್ಲಿಡಬೇಕೆಂದೂ ಖರ್ಚು ಮಾಡಬಾರದೆಂದೂ ಸಹ ತೀರ್ಮಾನಿಸಿದ್ದರು. ಪುರಸಭೆಯ ಮುಖ್ಯಾಧಿಕಾರಿಗಳಾದ ಶ್ರೀ ಎನ್. ಎಸ್. ರಾಮಯ್ಯನವರು ತಾವು ವರ್ಗವಾಗಿ ಭಾರ್ಜು ವಹಿಸಿಕೊಟ್ಟ ದಿನವೇ ಎಲ್ಲಾ ೧೮ ಸಾವಿರ ರೂಪಾಯಿಗಳನ್ನು ಬ್ಯಾಂಕಿನಿಂದ ಪಡೆದು ಮೀಟಿಂಗಿನಲ್ಲಿ ತೀರ್ಮಾನವಾಗದ ಕೆಲಸಗಳಿಗೆ ಸದಸ್ಯರ ಗಮನಕ್ಕೆ ತರದೆ ಒಂದೇ ದಿನದಲ್ಲಿ ಖರ್ಚು ಹಾಕಿದ್ದಾರೆ. ಇದು ಭ್ರಷ್ಟಾಚಾರದ ಪರಮಾವಧಿಯಾಗಿರುವುದರಿಂದ ಇದರ ಪೂರ್ಣ ತನಿಖೆ ನಡೆಸಿ ಇವರ ಮೇಲೆ ಸೂಕ್ತ ಶಿಸ್ತಿನ ಕ್ರಮ ಜರುಗಿಸಿ ದುರುಪಯೋಗ ಮಾಡಿರುವ ಹಣವನ್ನು ವಸೂಲು ಮಾಡಬೇಕಾಗಿ ಕೋರುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಕ್ರಮ ತೆಗೆದುಕೊಳ್ಳುತ್ತೇವೆ.

(13) Mal-administration in city Munieipal Council, Robertsonpet K,G.F.

SRI T.S. MANI.—The silence of Government over the mal-administration of the City Municipal Council, Robertsonpet, K.G.F.

SRI A. LAKSHMISAGAR.—(Minister for Urban Development, Law and Parliamentary Affairs) The Government is not silent, Representations have been received listing various allegations against the administration in K.G.F. I have directed the Revenue Officers to look into it and submit to me a report. Thereupon, further action will be taken in accoordance with law.

(14) ಕರ್ನಾಟಕಕ್ಕೆ ಡ್ಯೂಕ್ ಆಫ್ ವೆಲ್ಲಿಂಗ್‌ಟನ್ ಭೇಟಿ ಬಗ್ಗೆ.

೩-೫೦ ಪಿ.ಎಂ.

ಶ್ರೀ ಎಂ. ವೀರಪ್ಪ ಮೊಯಿಲಿ,(ಕಾರ್ಕಳ).—ತಾರೀಖು ೨೪-೨-೧೯೮೬ ರಂದು ಎಲ್ಲ ದಿನ ಪತ್ರಿಕೆಗಳಲ್ಲಿ ಪ್ರಕಟವಾದ ವೆಲ್ಲಿಂಗ್ಟನ್ ಡ್ಯೂಕ್ ಅವರ ಪತ್ನಿ ಮತ್ತು ಅವರ ಜೊತೆಗೆ ಶಾಸಕರಾದ ಶ್ರೀ ಮೈಸುದ್ದೀನ್ ಅವರ ಭಾವಚಿತ್ರ ಮತ್ತು ವರದಿಯನ್ನು ನೋಡಿ ದಿಗಿಲು ಉಂಟಾಗಿದೆ ಸಾಮ್ರಾಜ್ಯ ಶಾಹಿ ಶಕ್ತಿಯನ್ನು ಭಾರತ ವರ್ಷದಿಂದ ಹೊಡೆದಟ್ಟಲು ಪ್ರಾಣದ ಹಂಗನ್ನು ತೊರೆದು ಧೀರೋದಾತ್ತವಾಗಿ ಹೋರಾಡಿ ರಾಷ್ಟ್ರಚೇತನದ ಬಲಿಗಂಭಕ್ಕೆ ತಲೆಯೊಡ್ಡಿದ ಮೈಸೂರಿನ ಹುಲಿ, ಶ್ರೇಷ್ಠ ರಾಷ್ಟ್ರ ಚೇತನಶಾಲಿ ನಾಯಕ ಟಿಪ್ಪು ಸುಲ್ತಾನರನ್ನು ವಂಚನೆ ಪಿತೂರಿಯಿಂದ ಕೊಂದ, ನರಮೇಧ ರಕ್ತ ಪಿಪಾಸಂಗಳ ಕ್ರೂರತನವನ್ನು ನೆನಪು ಮಾಡುವ ಚರಿತ್ರೆಯ ಪುನರಾವರ್ತನೆಯಾದಂತೆ ಭಾಸವಾಯಿತು. ಅತ್ಯಾಚಾರ ಎಷ್ಟೇ ನೋವ್ತ, ಅನ್ಯಾಯ, ಅವಮಾನವನ್ನು ಕೂಡಾ ಅನುಭವಿಸಿ, ನುಂಗಿ, ಅತಿಥಿಗಳವನ್ನು ಸ್ವಾಗತಿಸುವುದು ಭಾರತೀಯ ಪರಂಪರೆಯ ವಿಶಿಷ್ಟ ಗುಣವಿರಬಹುದು. ಆದರೆ ನಮ್ಮ ದೇಶದ ದಾಸ್ಯ ಸಂಕೋಲೆಯನ್ನು ಕಡಿಯಲು ಹೋರಾಟ ಕೌರ್ಯದ ಜೀವನತ್ಯ ಶಿಬಿರವನ್ನು ಏರಿದ ನಮ್ಮ ಟಿಪ್ಪು ಸುಲ್ತಾನರನ್ನು ಪತನಗೊಳಿಸಿದ ಕುಯುಕ್ತಿಯ ಪ್ರತಿಮೂರ್ತಿ ವೆಲ್ಲೆಸ್ಲಿಯ ಸ್ಮಾರಕವನ್ನು ರಚಿಸುವ ಸನ್ನಾಹ ರಾಷ್ಟ್ರದ ಅಭಿಮಾನವನ್ನು ಕೆರಳಿಸಿ ಕೆಡುಹುವ ಅತ್ಯಂತ ರಾಷ್ಟ್ರೀಯ ವಿಘಾತಕ ನಿಕೃಷ್ಟಕೃತ್ಯವೆನಿಸುತ್ತದೆ. ಇಂತಹ ರಾಷ್ಟ್ರೀಯ, ನಿರಭಿಮಾನ ಪ್ರವೃತ್ತಿ, ನವಪೀಳಿಗೆಯನ್ನು ರಾಷ್ಟ್ರ ಭಕ್ತಿ ಮತ್ತು

ಉಜ್ವಲ ಅಭಿಮಾನ ಸರಣಿಯ ಕೊಂಡಿಯನ್ನು ಕಳಚಿ ಕವಲು ದಾರಿಯ ರಾಷ್ಟ್ರೀಯ ದುರಂತದ ಕಡೆಗೆ ಕೊಂಡೊಯ್ಯಬಹುದು. ವೆಲ್ಲೆಸ್ಲಿಗೆ ಕೊಡುವ ಗೌರವ, ಮಾಡುವ ಸ್ಮಾರಕ ಮುಂದೆ ಜಲಿಯಾನ್ ವಾಲಬಾಗ್ ದುರಂತದ ಅತ್ಯಂತ ಕ್ರೂರ ದಯಾಹೀನ ಜನರಲ್ ಡಯರ್‌ನಂತಹವರಿಗೆ ಗೌರವ ಸ್ಮಾರಕ ಮಾಡುವ ಹೀನ ಪರಂಪರೆಗೆ ನಾಂದಿಯಾಗಬಹುದು.

ರಾಷ್ಟ್ರದಲ್ಲಿ ಇಂತಹ ಸಾಮ್ರಾಜ್ಯ ಶಾಹಿ ಹಿಂಬಾಲಕರ ದಾಸ್ಯ ಪ್ರವೃತ್ತಿ ಅಳಿದು ರಾಷ್ಟ್ರೀಯ ಭಕ್ತಿ, ಅಭಿಮಾನ, ಪ್ರಾಜ್ವಲ್ವಮಾನ್ಯವಾಗಿ ಬೆಳೆಯುವಂತೆ ಸರಕಾರ ಮುನ್ನೆಚ್ಚರಿಕೆ ವಹಿಸುವುದೆ?

ಈಗಿನ ವೆಲ್ಲಿಂಗ್ಡನ್ ಡ್ಯೂಕ್ ನಮ್ಮ ರಾಷ್ಟ್ರದ ಮೇಲೆ ಏನೂ ಅನ್ಯಾಯ ಮಾಡಿಲ್ಲ. ಆದರೆ ವೆಲ್ಲೆಸ್ಲಿಯ ಮೊಮ್ಮಗನೆಂದು ಅವರಿಗೆ ವೀರೋಚಿತ ಸ್ವಾಗತ ನೀಡಿ ದೇಶದ ಇತಿಹಾಸದ ವೀರ ಪರಂಪರೆಯನ್ನು ಸಮಾಧಿ ಮಾಡಿದ ರಾಷ್ಟ್ರದ ಖಳನಾಯಕರ ಇತಿಹಾಸವನ್ನು ಗೌರವಿಸಂಪುದು. ನಾವು ಅನುಭವಿಸಿದ ದಾಸ್ಯ ಜೀವನದ ದ್ಯೋತಕವಾಗಬಹುದು. ಜನರಲ್ಲಿ ಕೆರಳಿದ ಈ ರಾಷ್ಟ್ರ ಚಿಂತನೆ ಸರಕಾರದ ಗಮನಕ್ಕೆ ಬಂದಿದೆಯೆ?

ಶ್ರೀಮತಿ ಮುಕ್ತರುನ್ನೀಸಾ.—ಅಧ್ಯಕ್ಷರವರೆ, ನನಗೆ ಒಂದು ನಿಮಿಷ ಮಾತನಾಡಲಿಕ್ಕೆ ಅವಕಾಶ ಕೊಡಿ. ನಾವು ಏನೂ ತೊಂದರೆ ಕೊಡುವುದಿಲ್ಲ. ಪತ್ರಿಕೆಯಲ್ಲಿನ ವಿಷಯವನ್ನು ನೋಡಿ ನಮಗೆ ಬಹಳ ಬೇಜಾರು ಆಗಿದೆ.

ಅಧ್ಯಕ್ಷರು,—ಅವಕಾಶ ಕೊಡಲು ಬರುವುದಿಲ್ಲ, ತಾವು ಕುಳಿತುಕೊಳ್ಳಬೇಕು.

ಶ್ರೀಮತಿ ಮುಕ್ತರುನ್ನೀಸಾ.—ಅಧ್ಯಕ್ಷರೆ, ನನಗೆ ಅವಕಾಶ ಕೊಡಬೇಕು...

ಅಧ್ಯಕ್ಷರು.—ನೀವು ಮಾತನಾಡುವುದು ಯಾವುದೂ ರಿಕಾರ್ಡ್‌ಗೆ ಹೋಗುವುದಿಲ್ಲ. ತಾವುಗಳು ಹೆಣ್ಣು ಮಕ್ಕಳು ಶಾಂತಿ, ಸಮಾಧಾನದಿಂದ ಇರಬೇಕು.....

ಶ್ರೀ ರಾಮಕೃಷ್ಣ ಹೆಗಡೆ,—ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರಾದ ಶ್ರೀ ವೀರಪ್ಪ ಮೊಯ್ಲಿಯವರು ಹಿಂದೆನೇ ಕಲಮಿನ ಪ್ರಕಾರ ಈ ಒಂದು ವಿಚಾರವನ್ನು ಈ ಸಭೆಯ ಮುಂದೆ ತಂದಿದ್ದಾರೆ. ಮಾನ್ಯರು ಇದನ್ನು ಓದಿದಾಗ, ನನಗೆ ಒಂದು ಸಲ ಭಾಸ ಆಯಿತು. ಅವರು ಬರೆದಿರತಕ್ಕಂತಹ ಕಾದಂಬರಿಯ ಒಂದು ಭಾಗವನ್ನೇ ಅವರು ಓದುತ್ತಿದ್ದಾರೆ ಎಂದು. ಅವರು ಅಷ್ಟು ಸುಂದರವಾದ ಶೈಲಿಯನ್ನು ಪಳಗಿಸಿ ಕೊಂಡಿದ್ದಾರೆ. ಈಗ ಆಗಿರತಕ್ಕಂತಹ ವಿಚಾರವು ಇಷ್ಟೆ. ಮತ್ತು ನಮ್ಮ ಬೇಗಂ ಸಾಹೀಬಾರವರು ಕೂಡಾ ಇದರ ಬಗ್ಗೆ ಬಹಳ ಕಳಕಳಿ ಇಲ್ಲ; ಬಹಳ ಉದ್ರಿಕ್ತರಾಗಿದ್ದಾರೆ.

ಅಧ್ಯಕ್ಷರು.—ಅವರು ಮಾರಿಯ್ಮನ ಅವತಾರ ತಾಳಿದ್ದಾರೆ ..

ಶ್ರೀ ಕೆ.ಎಚ್.ಶ್ರೀನಿವಾಸ್.—ಅವರ ಕೈಯಲ್ಲಿ ಕತ್ತಿ ಇಲ್ಲ...

ಶ್ರೀ ರಾಮಕೃಷ್ಣ ಹೆಗಡೆ.—ಅವರ ಮನಸ್ಸಿನಲ್ಲಿ ಆಗಿರತಕ್ಕಂತಹ ಭಾವನೆಯನ್ನು ನಾನು ಅರ್ಥ ಮಾಡಿಕೊಳ್ಳ ಬಲ್ಲೆ. ಆಗಿರತಕ್ಕಂತಹ ಸಂಗತಿ ಇಷ್ಟೆ. ವೆಲ್ಲಿಂಗ್ಡನ್ ಡ್ಯೂಕ್ ಅವರು ವೆಲ್ಲೆಸ್ಲಿಯವರ ಮೊಮ್ಮಗ ನಿಜ. ಮತ್ತು ವೆಲ್ಲೆಸ್ಲಿ ಈಗ ಇಲ್ಲ, ಆ ಕಾಲಕ್ಕೆ ಆದಂತಹ ಇತಿಹಾಸವೂ ಕೂಡಾ ನಮಗೆಲ್ಲರಿಗೂ ಗೊತ್ತು. ಅವರು ಆಗ ಮಾಡಿದಂತಹ ಕೆಲಸವೂ ನಮಗೆ ಗೊತ್ತು. ವೆಲ್ಲಿಂಗ್ಟನ್ ಡ್ಯೂಕ್‌ರವರು ವೆಲ್ಲೆಸ್ಲಿಯವರ ಮೊಮ್ಮಗ, ಸಂಬಂಧಿ ಎನ್ನುವುದನ್ನು ಬಿಟ್ಟರೆ, ಬೇರೆ ಯಾವುದೇ ರೀತಿಯಲ್ಲಿ ಅವರ ಪಾತ್ರ ಅಂದಿನ ಇತಿಹಾಸದಲ್ಲಿ ಇಲ್ಲ. ಡ್ಯೂಕ್‌ರವರು ನಮ್ಮ ದೇಶದ ಪ್ರವಾಸಕ್ಕೆ ಬಂದಿದ್ದರು. ಅವರು ಕರ್ನಾಟಕಕ್ಕೆ ಬರತಕ್ಕಂತಹ ಮುಖ್ಯ ಉದ್ದೇಶ, ಇಲ್ಲಿಯ wild life study ಮಾಡಿ ಅದನ್ನು ವರದಿ ಮಾಡಿ ಬರೆಯಲು ಬಂದಿದ್ದರು ಎರಡು ವರ್ಷಗಳ ಹಿಂದೆ ನಾವು ಒಂದು Tippu Sultan Research Foundation Trust ಎಂದು ಮಾಡಿದ್ದೇವೆ. ಮಾನ್ಯ ಸದಸ್ಯರಾದ ಮೊಯ್ನುದ್ದೀನ್‌ರವರು ಅದಕ್ಕೆ ಅಧ್ಯಕ್ಷರು. ಅದಕ್ಕೆ ಸರಕಾರವು ಈಗಾಗಲೇ ಏಳು ಲಕ್ಷ ರೂಪಾಯಿಗಳನ್ನು ಕೊಟ್ಟಿದೆ. ಇನ್ನೂ ಏಳು ಲಕ್ಷ ರೂಪಾಯಿಗಳು, ಸ್ವಲ್ಪ ಹೆಚ್ಚಿಗೆ ಕೊಟ್ಟರೂ ಕೊಡಬಹುದು; ಅಷ್ಟನ್ನು ಟ್ರಸ್ಟ್‌ಗೆ ಕೊಡುವವರಿದ್ದಾರೆ. ಅದರ ಉದ್ದೇಶ ಏನು ಅಂದರೆ, ಟಿಪ್ಪು ಸುಲ್ತಾನ್‌ರವರಿಗೆ ಸಂಬಂಧಪಟ್ಟಂತಹ ಅನೇಕ ದಾಖಲೆಗಳು ನಮ್ಮಲ್ಲಿ ಪೂರ್ಣವಾಗಿ ಇಲ್ಲ; ದುರ್ದೈವವಶಾತ್ ಅವುಗಳು ನಮ್ಮ ಹತ್ತಿರ ಇಲ್ಲ. ಆದರೆ ಇಡೀ ಪ್ರಪಂಚದ ಬೇರೆ ಬೇರೆ ಮ್ಯೂಸಿಯಂಗಳಲ್ಲಿ, ಮತ್ತು ಲೈಬ್ರರಿಗಳಲ್ಲಿ ಅವುಗಳು ಇವೆ ಎಂಬುದನ್ನು ಹೇಳಿದಾಗ, ನಾನು ಅದು

ಒಳ್ಳೆಯ ಕೆಲಸ, ಅಂತಹ ದಾಖಲೆಗಳನ್ನು ಒಟ್ಟುಗೂಡಿಸುವ ಕೆಲಸ ಮಾಡಬೇಕೆಂದು ಹೇಳಿದೆ. ಅಭಿಪ್ರಾಯ ಪಟ್ಟೆ. ಟಿಪ್ಪು ಸುಲ್ತಾನ್‌ರವರಿಗೆ ನಮ್ಮ ಇತಿಹಾಸದಲ್ಲಿ ಉನ್ನತ ಸ್ಥಾನ ಇದೆ, ಅವರಿಗೆ ಸಂಬಂಧಪಟ್ಟಂತಹ ದಾಖಲೆಗಳು, ನಮ್ಮಲ್ಲಿ ಇಲ್ಲ ಎಂದು ಹೇಳುವುದು ಅಪಮಾನಕಾರವಾದ ವಿಚಾರ ಎಂದು ನನಗನ್ನಿಸುತ್ತದೆ. ಮಾನ್ಯ ಸದಸ್ಯರು ಈ ಕುರಿತು ದಾಖಲೆಗಳನ್ನು ಸಂಗ್ರಹಿಸುವಲ್ಲಿ ಬಹಳ ಪ್ರಯತ್ನ ಪಡುತ್ತಿದ್ದಾರೆ, ಪಟ್ಟಿದ್ದಾರೆ. ನನಗನ್ನಿಸುತ್ತದೆ ಅವರು ಸುಮಾರು ಒಂದು ಸಾವಿರ ಜನರ ಜೊತೆಗೆ ಕರೆಸ್ಪಾಂಡೆನ್ಸ್ ಮಾಡಿರಬೇಕು. ಅವರು ಬರೆದಿರತಕ್ಕಂತಹ ಪತ್ರಗಳಿಗೆ ಎಲ್ಲಾ ಕಡೆಯಿಂದಲೂ ಬಹಳ ಒಳ್ಳೆಯ ಸಹಾಯಕಾರಿಯಾಗಿ, ಉತ್ತರ ರೂಪವಾಗಿ ಪತ್ರಗಳು ಬಂದಿವೆ.

ನಾನು ಅವರಿಗೆ ಒಂದು ಸಾರಿ ಈ ದಾಖಲೆಗಳನ್ನು ನೋಡಿ ಬರಲು ಕಳುಹಿಸಿ ಕೊಟ್ಟೆ. ಎಲ್ಲೆಲ್ಲಿ ಇಂತಹ ದಾಖಲೆಗಳು ಇವೆ, ಅವುಗಳನ್ನು ಅಂದರೆ ಟಿಪ್ಪುಸುಲ್ತಾನ್, ಹೈದರ್ ಆಲಿ, ಇವರಿಗೆ ಸಂಬಂಧ ಪಟ್ಟಂತಹ ದಾಖಲೆಗಳನ್ನು ಸಿಕ್ಕಿದಲ್ಲಿ, ಅವರ ಒಪ್ಪಿಗೆ ಪಡೆದು ತಿದನ್ನು ಅವರು ಕೊಟ್ಟರೆ ತರಬೇಕು, ಇಲ್ಲದಿದ್ದರೆ ಅವುಗಳು ಇರುವ ಮ್ಯೂಸಿಯಂನಲ್ಲಿರ ತಕ್ಕಂತಹ ಚಿತ್ರ, ಲೈಬ್ರರಿಯಲಿರತಕ್ಕಂತಹ ದಾಖಲಾತಿಗಳು, ಅವುಗಳ ಮೈಕ್ರೋಫಿಲ್ಮ್ ತೆಗೆದುಕೊಂಡು ಅದನ್ನು ಇಲ್ಲಿ ತಂದು ಡೆವಲಪ್ ಮಾಡಿ. ಅಂತಹ ದಾಖಲೆಗಳು, ಅಂತ್ತ ಚಿತ್ರಗಳು ನಮ್ಮಲ್ಲಿ ಶಾಶ್ವತವಾಗಿ ಇರತಕ್ಕಂತಹ ಒಂದು ವ್ಯವಸ್ಥೆಯನ್ನು ಮಾಡಬೇಕು; ಇದು ಬಹಳ ಮುಖ್ಯವಾದುದು. ಡ್ಯೂಕ್ ಆಫ್ ವೆಲ್ಲಿಂಗ್ಟನ್‌ರವರು ನಮ್ಮಲ್ಲಿಗೆ ಬಂದಾಗ ಅವರು ಶ್ರೀರಂಗಪಟ್ಟಣಕ್ಕೆ ಹೋದರು. ಮತ್ತು ಅವರ ಕೈಯಲ್ಲಿ ಏನು ದಾಖಲಾತಿಗಳು ಇದ್ದುವು, ಚಿತ್ರಗಳು ಇದ್ದುವು, ಅವುಗಳನ್ನು ನಮಗೆ ಕೊಡಲಿಕ್ಕೆ ಅವರು ಒಪ್ಪಿ ಕೊಂಡರು. ನಾವು ಟಿಪ್ಪು ಸುಲ್ತಾನ್ ಹೆಸರಿನಲ್ಲಿ ಏನು ಸ್ಮಾರಕ ಮಾಡುತ್ತಿದ್ದೇವೆ, ಅದಕ್ಕೆ ಬೇಕಾದಂತಹ ದಾಖಲಾತಿಗಳನ್ನು, ಅಂದರೆ ಡ್ಯೂಕ್‌ರವರ ಹತ್ತಿರ ಇರುವಂತಹವುಗಳನ್ನು ಕೊಡಲಿಕ್ಕೆ ಒಪ್ಪಿದ್ದಾರೆ. ಇಂತಹವರು ನಮ್ಮ ದೇಶಕ್ಕೆ, ರಾಜ್ಯಕ್ಕೆ ಬಂದಾಗ ಅವರಿಗೆ ಒಂದು ಸ್ಪೇಷಸ್ ಇದೆ. ಅವರು world wild wife Trust ನ Trustee ಆಗಿದ್ದಾರೆ ಅಂತಹವರನ್ನು ನಾವು ಸ್ಪೇಷ್ ಗೆಸ್ಟ್ ಆಗಿ ಮಾಡಿದ್ದು ನಿಜ. ಹೀಗೆ ಮಾಡಿದ, ಇಂತಹ ಉದಾಹರಣೆಗಳು ಬೇಕಾದಷ್ಟು ಇದೆ ಇದರಿಂದಾಗಿ ದೇಶಕ್ಕೆ ಯಾವುದೇ ರೀತಿಯಲ್ಲಿ ಅಪಮಾನ ಮಾಡಿದ ಹಾಗೆ ಆಗಲಿಲ್ಲ. ಪತ್ರಿಕಾ ಗೋಷ್ಠಿಯಲ್ಲಿ ಅವರು emotional ಆಗಿರಬಹುದು. ಅವರ ಅಜ್ಜನ ಕಾಲದಲ್ಲಿ ಅದಂತಹ ಘಟನೆಗಳನ್ನು ನೋಡಿದಾಗ ಅವರ ಕಣ್ಣಿಗೆ ಮಂಜು ಬಂದಿರಬಹುದು. ಅಂತಹ ಘಟನೆಗಳನ್ನು ನೆನಸಿ ಕೊಂಡಾಗ, ಪತ್ರಿಕ ಗೊಷ್ಟಿಯಲ್ಲಿ ಹೇಳುವಾಗ ಅವರು ಗದ್ಗದಿತರಾಗಿರಬಹುದು. ಅವರು ತಮ್ಮ ಅನುಭವದಲ್ಲ ಎರಡು ಮಾತುಗಳನ್ನು ಹೇಳಿರಬಹುದು. ಅದನ್ನೇ ತಾವು ಸರಿ ಎಂದು ತಿಳಿದು ಕೊಳ್ಳುವುದು ಸರಿಯಲ್ಲ. ನಾವು ವೆಲ್ಲೆಸ್ಲಿಯ ಸ್ಮಾರಕವನ್ನು ಮಾಡುವುದಿಲ್ಲ. ಅವರು ಹೇಳಿದಂಥ ಮಾತಿಗೆ ನಾವು ಜವಾಬ್ದಾರರಲ್ಲ, ಆಡಳಿತ ಪತ್ರಿಕಾ ವರದಿ ಸರಿಯಾಗಿ ರಿಪೋರ್ಟ್ ಆಗಿಲ್ಲವೊ ಏನೋ ನನಗೆ ಗೊತ್ತಿಲ್ಲ. ಆದರೆ ಅಂತಹ ವಿಚಾರ ನಮ್ಮ ಮುಂದೆ ಇಲ್ಲ. ಅವರು ಕೆಲವು ದಾಖಲೆಗಳನ್ನು ಕೊಟ್ಟಿದ್ದಾರೆ. ಅವುಗಳನ್ನು ಸಂಗ್ರಹಣೆ ಮಾಡಿ ಇಟ್ಟು ಕೊಂಡಿದ್ದೇವೆ. ಇಷ್ಟು ಮಾತ್ರ ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶಾಸನ ರಚನಾ ಕಾರ್ಯ ಕಲಾಪಗಳು

ಅಧ್ಯಕ್ಷರು.—ಮಾನ್ಯ ಮಂತ್ರಿಗಳ ಹೆಸರಿನ ಮುಂದೆ ಇರತಕ್ಕಂಥ ಮಸೂದೆಯನ್ನು ಮಂಡಿಸಬಹುದು.

1986ನೇ ಇಸವಿಯ ಕರ್ನಾಟಕ ವಿಮಾನುಗಾರಿಕೆ ಬಂದರು ಸರಹದ್ದುಗಳ ಪ್ರಾಧಿಕಾರ ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಸಿ.ಭೆ ರೇಗೌಡ.—(ವಿಮಾನುಗಾರಿಕೆ ಮತ್ತು ಬಂದರುಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ 1986ನೇ ಇಸವಿಯ ಕರ್ನಾಟಕ ವಿಮಾನುಗಾರಿಕೆ ಬಂದರು ಸರಹದ್ದುಗಳ ಪ್ರಾಧಿಕಾರ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ಕೋರುತ್ತೇನೆ.